

## ಕೌತುಕದ ಬಂಡೆ ವಿನ್ಯಾಸಗಳು!

ಮಂತ್ರಾಲಯದಿಂದ 22 ಕಿ.ಮೀ. ದೂರದಲ್ಲಿ, ರಾಯಚೂರು ಜಿಲ್ಲೆಯ ಗಾಣದಾಳದಲ್ಲಿ ಪಂಚಮುಖಿಯೆಂಬ ಕ್ಷೇತ್ರವಿದೆ. ಅಲ್ಲಿ ಬೃಹತ್ ಬಂಡೆಯ ಮೇಲೆ ಆಂಜನೇಯಸ್ವಾಮಿ ದೇವಾಲಯವಿದೆ. ಮೆಟ್ಟಿಲುಗಳನ್ನೇರಿ ಮೇಲೆ ತಲುಪುತ್ತಿದ್ದಂತೆ ಮೊದಲು ಆಂಜನೇಯನ ಒಂದೂವರೆ ಅಡಿ ಉದ್ದದ ಪಾದಗಳ ದರ್ಶನ ಸಿಗುತ್ತದೆ. ಈ ಪಾದಗಳಿಂದಲೇ ರಾಘವೇಂದ್ರ ಸ್ವಾಮಿಗಳಿಗೆ ಮಂತ್ರಾಲಯಕ್ಕೆ ತೆರಳಲು ಸೂಚನೆ ಲಭಿಸಿತೆಂಬ ನಂಬಿಕೆ ಇಲ್ಲಿನ ಜನರದ್ದು.

ಮುಂದೆ ಬಂಡೆಯೊಳಗಿನ ಗುಹೆಯಂತಹ ಗರ್ಭಗುಡಿಯಲ್ಲಿ ಆಂಜನೇಯ ಸ್ವಾಮಿಯ 5 ಮುಖಗಳನ್ನೊಳಗೊಂಡ ಪಂಚಮುಖಿ ಬೆಳ್ಳಿ ವಿಗ್ರಹ ದರ್ಶನವಾಗುತ್ತದೆ. ಅಲ್ಲಿಂದ ಕೆಳಗಿಳಿದು ಬಂದು ಹಿಂದುಗಡೆ ಸುಮಾರು ನೂರು ಮೀಟರ್ ಕ್ರಮಿಸಿದರೆ, ಬಂಡೆಯ ಮೇಲೆ ಇರುವ ಬಂಡೆಯೊಂದನ್ನು ಕೊರೆದು ನಿರ್ಮಿಸಿದ ಮಹಾಲಕ್ಷ್ಮಿ ದೇವಿಯ ಮಂದಿರ ಗೋಚರಿಸುತ್ತದೆ. ಈ ಎರಡೂ ಕಡೆಗಳಲ್ಲಿ ಅಸಂಖ್ಯಾತ ವಾನರ ದರ್ಶನವಾಗುತ್ತದೆ. ಮಾತ್ರವಲ್ಲದೆ ವಿವಿಧಾಕೃತಿಯ ಬಂಡೆ ವಿನ್ಯಾಸಗಳು ಕಾಣಸಿಗುತ್ತವೆ. ಅವುಗಳಲ್ಲಿ ಹಾಸಿಗೆ ಮತ್ತು ದಿಂಬಿನಾಕಾರದ ಹಾಗೂ ವಿಮಾನಾಕಾರದ ಎರಡು ಬಂಡೆ ವಿನ್ಯಾಸಗಳು ವಿಶೇಷವೆನಿಸಿವೆ. ಇಲ್ಲಿನ ಮಂದಿರಗಳೆಲ್ಲವೂ ಮಲಗಿರುವ ಬೃಹತ್ ಆನೆಗಳಂತಹ ಬಂಡೆಗಳ ಮೇಲೆ ಬಂಡೆಯಿಂದಲೇ ನಿರ್ಮಿತಗೊಂಡಿರುವುದು ವಿಶೇಷ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಬಾಲ್ಕನಿಯಲ್ಲಿ ವೆನಿಲಾ

ತಾರಸಿ ತೋಟಗಳೆಂದರೆ ಕೇವಲ ಹೂವಿನ ಅಥವಾ ಅಲಂಕಾರಿಕ ಗಿಡಗಳನ್ನು ಬೆಳೆಸುವುದಕ್ಕಷ್ಟೇ ಸೀಮಿತವಲ್ಲ. ನಗರದಲ್ಲಿಯೂ ದಿನನಿತ್ಯ ಬೇಕಾಗುವ ಹಣ್ಣು, ತರಕಾರಿ ಬೆಳೆಗಳನ್ನು ಯಶಸ್ವಿಯಾಗಿ ಚಿಕ್ಕ ತಾರಸಿ ತೋಟದಲ್ಲಿ ಬೆಳೆಯಬಹುದು. ಸಾಮಾನ್ಯವಾಗಿ ಶಿವಮೊಗ್ಗ, ಕೊಡಗು, ಶಿರಸಿ ಮಲೆನಾಡಿನಲ್ಲಿ ಕಾಫಿ ತೋಟ ಮತ್ತು ಅಡಿಕೆ ತೋಟಗಳಲ್ಲಿ ಬೆಳೆಯುವ ವೆನಿಲಾ ಬೆಳೆಯನ್ನು ಬೆಂಗಳೂರಿನ ಪೀಣ್ಯಾದಾಸರಹಳ್ಳಿ ಬಳಿಯ ಸೌಂದರ್ಯ ಬಡಾವಣೆಯ ಗೃಹಿಣಿ ಮಧುರ ಮಂಜುನಾಥ ನಾಯ್ಕ್, ತಮ್ಮ ಬಾಲ್ಕನಿಯಲ್ಲಿ ಬೆಳೆದು ಯಶಸ್ವಿಯಾಗಿದ್ದಾರೆ.

ಈ ಬಗ್ಗೆ ಹರ್ಷ ವ್ಯಕ್ತಪಡಿಸುವ ಮಧುರ, ‘ಇದು ಸುಲಭದ ಕೃಷಿ ಅಲ್ಲ. ಈ ಗಿಡ ವರ್ಷಕ್ಕೊಮ್ಮೆ ಹೂ ಬಿಡುತ್ತದೆ. ಅಲ್ಲಿಯವರೆಗೂ ತಾಳ್ಮೆ ಬೇಕು. ಹೂ ಬಿಡುವಾಗ ಪರಾಗಸ್ಪರ್ಶ ಕ್ರಿಯೆ ನೈಸರ್ಗಿಕವಾಗಿ ಆಗುವುದಿಲ್ಲ. ಅದನ್ನು ಕೃತಕವಾಗಿ ಮಾಡಬೇಕು. ಹೆಚ್ಚು ತಂಪಾದ ವಾತಾವರಣ, ತೇವಾಂಶವನ್ನು ಈ ಗಿಡಕ್ಕೆ ಅತ್ಯಗತ್ಯ. ಅಡುಗೆ ಮನೆಯ ತ್ಯಾಜ್ಯ ಮತ್ತು ಎಲೆಗೊಬ್ಬರವನ್ನೇ ಗಿಡಕ್ಕೆ ಹಾಕಿ ಬೆಳೆಸಿದ್ದೇವೆ’ ಎನ್ನುತ್ತಾರೆ.

‘ತಾರಸಿಯಲ್ಲಿ ಈ ಹಿಂದೆ ತರಕಾರಿಗಳನ್ನು ಬೆಳೆಸಿದ್ದೆವು. ಇದೇ ಮೊದಲ ಬಾರಿಗೆ ವೆನಿಲಾ ಗಿಡ ಬೆಳೆಸುತ್ತಿದ್ದೇವೆ. ಈಗ ಹಸಿರು ಬೀನ್ಸ್ ಬಂದಿದೆ. ಕಾಯಿ ಹಳದಿ ಬಣ್ಣಕ್ಕೆ ತಿರುಗಿದಾಗ ಫಲ ಸಿಗುತ್ತದೆ’ ಎನ್ನುವ ಅವರು ‘ಹೆಚ್ಚು ಲಾಭದಾಯಕವಾದ ಈ ಬೆಳೆಯನ್ನು ಬೆಳೆಯುವುದು ಬೇಸಿಗೆಯಲ್ಲಿ ಕಷ್ಟ. ಆ ಸಂದರ್ಭದಲ್ಲಿ ಎಲೆಗೆ ಮತ್ತು ಬಳ್ಳಿಗೆ ನೀರು ಚಿಮುಕಿಸುತ್ತಿರಬೇಕು’ ಎಂದು ಮಾಹಿತಿ ನೀಡಿದರು.

‘ಈ ಬಾರಿ ಒಂದು ಕೆ.ಜಿ.ಯಷ್ಟು ಹಸಿರು ಬೀನ್ಸ್ ಸಿಗಬಹುದು. ಎರಡನೇ ಅವಧಿಗೆ ಇನ್ನೂ ಹೆಚ್ಚು ಬೆಳೆ ಸಿಗುವ ನಿರೀಕ್ಷೆ ಇದೆ. ಇನ್ನು ಗಿಡದ ಎಲೆಯ ರಸ ದೇಹಕ್ಕೆ ತಾಗಿಸಿಕೊಂಡರೆ ತುರಿಕೆಯಾಗುತ್ತದೆ. ಎಚ್ಚರಿಕೆಯಿಂದ ಗಿಡದ ಪೋಷಣೆ ಮಾಡಬೇಕು. ವೆನಿಲಾವನ್ನು ಐಸ್ ಕ್ರೀಮ್, ಚಾಕೊಲೇಟ್, ಟೀ ಸೇರಿದಂತೆ ಮುಂತಾದ ಉತ್ಪನ್ನಗಳಿಗೆ ಬಳಸಲಾಗುತ್ತದೆ. ವಿವಿಧ ರೀತಿಯಲ್ಲಿ ಬಳಕೆಯಾಗುವ ವೆನಿಲಾ ಒಳಗೊಂಡ ಉತ್ಪನ್ನವು ಮಾರುಕಟ್ಟೆಯಲ್ಲಿ ದುಬಾರಿ ಪದಾರ್ಥ ಎನಿಸಿಕೊಂಡಿದೆ’ ಎಂದರು.

–ಪ್ರಸನ್ನ ಕುಮಾರ್, ಪೀಣ್ಯ ದಾಸರಹಳ್ಳಿ

